ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)

ಕರ್ನಾಟಕ ಪಠ್ಯಪುಸ್ತಕ ಸಂಘ,6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

ಇ-ಮೇಲ್: ddpi.ktbs@edukar.gov.in,ವೆಬ್ ಸೈಟ್: http://www.ktbs.kar.nic.in

# ಪತ್ರಿಕಾ ಪ್ರಕಟಣೆ

2023-24ನೇ ಸಾಲಿಗೆ ಜಾರಿಯಲ್ಲಿರುವ ಪಠ್ಯಪುಸ್ತಕಗಳನ್ನು ಸರ್ಕಾರದ ಆದೇಶದ ಮೇರೆಗೆ ವಿಷಯ ತಜ್ಞರು 6ರಿಂದ 10ನೇ ತರಗತಿಗಳ ಕನ್ನಡ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ 6 ರಿಂದ 10ನೇ ತರಗತಿಗಳ ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಪರಿಶೀಲಿಸಿ, ಕೆಲವು ಮಾರ್ಪಾಡುಗಳನ್ನು ಸೂಚಿಸಿರುತ್ತಾರೆ. (ಅನುಬಂಧ-1 ಮತ್ತು 2 ಲಗತ್ತಿಸಿದೆ)

ತಿದ್ದೋಲೆ ರೂಪದಲ್ಲಿ ಸಿದ್ಧಪಡಿಸಿ, ರಾಜ್ಯ ಸರ್ಕಾರ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಶಾಲೆಗಳಿಗೆ ನೀಡಲಾಗುವುದು. ತಿದ್ದೋಲೆಯ ಸಾಫ್ಟ್ ಪ್ರತಿಯನ್ನು ಕರ್ನಾಟಕ ಪಠ್ಯಪುಸ್ತಕ ಸಂಘದ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು.

B.S.R.
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು

## ಅನುಬಂಧ-1

## 2023-24ನೇ ಸಾಲಿನಲ್ಲಿ ಜಾರಿಯಲ್ಲಿರುವ ಕನ್ನಡ ಭಾಷಾ ವಿಷಯದ ಪಠ್ಯಪುಸ್ತಕಗಳಿಗೆ ಸಂಬಂಧಿಸಿದಂತೆ ಸೂಚಿಸಿರುವ ಬದಲಾವಣೆಗಳು

| ತರಗತಿ | ಭಾಷೆ | ಗದ್ಯ/ಪದ್ಯ | 2023-24ನೇ ಸಾಲಿಗೆ ಜಾರಿಯಲ್ಲಿರುವ ಪಠ್ಯಪುಸ್ತಕದಲ್ಲಿರುವ ಗದ್ಯ/ಪದ್ಯ | 2023-24ನೇ ಸಾಲಿನಲ್ಲಿ ಜಾರಿಯಲ್ಲಿರುವ ಪಠ್ಯಪುಸ್ತಕಗಳಲ್ಲಿ ಮಾಡಿಕೊಳ್ಳಬೇಕಾದ ತಿದ್ದುಪಡಿಗಳು/ಸೇರ್ಪಡೆಗಳು (ಗದ್ಯ/ಪದ್ಯ) |
|---|---|---|---|---|
| 6 | ಪ್ರಥಮ ಭಾಷೆ | ಪದ್ಯ | 'ನಮ್ಮದೇನಿದೆ?' ಕೃತಿಕಾರರು :ನಿರ್ಮಲಾ ಸುರತ್ಕಲ್ | 'ನೀ ಹೋದ ಮರುದಿನ' ಕೃತಿಕಾರರು :ಚೆನ್ನಣ್ಣ ವಾಲೀಕಾರ |
| 7 | ಪ್ರಥಮ ಭಾಷೆ | ಪೂರಕ ಗದ್ಯ | 'ಸಾಮಾಜಿಕ ಕಳಕಳಿಯ ಮೊದಲ ಶಿಕ್ಷಕಿ' ಕೃತಿಕಾರರು: ರಮಾನಂದಆಚಾರ್ಯ | 'ಸಾವಿತ್ರಿಬಾಯಿ ಫುಲೆ' ಕೃತಿಕಾರರು : ಡಾ. ಎಚ್.ಎಸ್. ಅನುಪಮ. |
| 8 | ಪ್ರಥಮ ಭಾಷೆ | ಪೂರಕ ಗದ್ಯ | 'ಭೂ ಕೈಲಾಸ' ಪೌರಾಣಿಕ ನಾಟಕ ಕೃತಿಕಾರರು :ಪಾರಂಪಳ್ಳಿ ನರಸಿಂಹ ಐತಾಳ | 'ಮಗಳಿಗೆ ಬರೆದ ಪತ್ರ' ಕೃತಿಕಾರರು : ಮೂಲ ಜವಾಹರಲಾಲ್ ನೆಹರು ಅನುವಾದ: ತಿ.ತಾ. ಶರ್ಮ, ಸಿದ್ಧನಹಳ್ಳಿ ಕೃಷ್ಣಶರ್ಮ |
| 10 | ಪ್ರಥಮ ಭಾಷೆ | ಗದ್ಯ | 'ನಿಜವಾದ ಆದರ್ಶ ಪುರುಷಯಾರಾಗಬೇಕು?' ಕೃತಿಕಾರರು : ಕೇಶವ ಬಲಿರಾಮ ಹೆಡಗೇವಾರ | 'ಸುಕುಮಾರ ಸ್ವಾಮಿಯಕಥೆ' ಕೃತಿಕಾರರು : ಶಿವಕೋಟ್ಯಾಚಾರ್ಯ |
| 10 | ಪ್ರಥಮ ಭಾಷೆ | ಗದ್ಯ | 'ಶ್ರೇಷ್ಠ ಭಾರತೀಯ ಚಿಂತನೆಗಳು' ಕೃತಿಕಾರರು :ಶತಾವಧಾನಿ ಡಾ. ಆರ್. ಗಣೇಶ್ | 'ಯುದ್ಧ' ಕೃತಿಕಾರರು : ಸಾ.ರಾ. ಅಬೂಬಕ್ಕರ್ |
| 10 | ಪ್ರಥಮ ಭಾಷೆ | ಪೂರಕ ಗದ್ಯ | 'ತಾಯಿ ಭಾರತೀಯಅಮರ ಪುತ್ರರು' ಕೃತಿಕಾರರು : ಚಕ್ರವರ್ತಿ ಸೂಲಿಬೆಲೆ | ಪೂರ್ಣ ಗದ್ಯ ಕೈಬಿಡಲಾಗಿದೆ |
| 10 | ಪ್ರಥಮ ಭಾಷೆ | ಪದ್ಯ | 'ವೀರಲವ' ಕೃತಿಕಾರರು : ಲಕ್ಷ್ಮೀಶ | 'ವೀರಲವ' ಪದ್ಯದ ಟಿಪ್ಪಣಿಯಲ್ಲಿ ವಾಲ್ಮೀಕಿ ಮಹರ್ಷಿಗಳ ಪರಿಚಯದ ತಿದ್ದುಪಡಿ |
| 8 | ದ್ವಿತೀಯ ಭಾಷೆ | ಗದ್ಯ | 'ಕಾಲವನ್ನುಗೆದ್ದವರು' ಕೃತಿಕಾರರು :ಕೆ.ಟಿ. ಗಟ್ಟಿ | 'ಬ್ಲಡ್‌ಗ್ರೂಪ್' ಕೃತಿಕಾರರು : ವಿಜಯಮಾಲಾ ರಂಗನಾಥ್ |
| 9 | ದ್ವಿತೀಯ ಭಾಷೆ | ಗದ್ಯ | 'ಅಚ್ಚರಿಯಜೀವಿ ಇಂಬಳ' ಕೃತಿಕಾರರು :ಪಿ. ಸತ್ಯನಾರಾಯಣಭಟ್ | 'ಉರುಸುಗಳಲ್ಲಿ ಭಾವೈಕ್ಯತೆ' ಕೃತಿಕಾರರು : ದಸ್ತಗೀರ ಅಲ್ಲೀಭಾಯಿ |

## ಅನುಬಂಧ-2

# 2023-24ನೇ ಸಾಲಿನಲ್ಲಿ ಜಾರಿಯಲ್ಲಿರುವ ಸಮಾಜ ವಿಜ್ಞಾನ ವಿಷಯದ ಪಠ್ಯಪುಸ್ತಕಗಳಿಗೆ ಸಂಬಂಧಿಸಿದಂತೆ ಸೂಚಿಸಿರುವ ಬದಲಾವಣೆಗಳು

| ಕ್ರ ಸಂ | ತರಗತಿ | ವಿಷಯ |
|---|---|---|
| 1 | 6ನೇ ತರಗತಿ ಸಮಾಜ ವಿಜ್ಞಾನ ಭಾಗ-1 | ನಮ್ಮ ಹೆಮ್ಮೆಯ ರಾಜ್ಯ- ಕರ್ನಾಟಕ ಎಂಬ ಅಧ್ಯಾಯದ ಪುಟ ಸಂಖ್ಯೆ 33ರಲ್ಲಿ ಕಲಬುರ್ಗಿ ವಿಭಾಗದ ವಿಷಯಾಂಶವನ್ನು ಬೋಧಿಸುವಾಗ **"ಈ ವಿಭಾಗದ ಜಿಲ್ಲೆಗಳಿಗೆ ವಿಶೇಷ ನೆರವು ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಸಂವಿಧಾನದ ಅನುಚ್ಛೇದ 371 (ಜೆ) ಅಡಿಯಲ್ಲಿ ವಿಶೇಷ ಸ್ಥಾನಮಾನ ನೀಡಿದೆ"**ಎಂಬ ವಾಕ್ಯವನ್ನು ಸೇರ್ಪಡೆ ಮಾಡಲಾಗಿದೆ. |
| 2 | 6ನೇ ತರಗತಿ ಸಮಾಜ ವಿಜ್ಞಾನ ಭಾಗ-1 | **"ವೇದಕಾಲದ ಸಂಸ್ಕೃತಿ"** ಎಂಬ ಹೊಸ ಅಧ್ಯಾಯವನ್ನು ಸೇರ್ಪಡೆ ಮಾಡಲಾಗಿದೆ. |
| 3 | 6ನೇ ತರಗತಿ ಸಮಾಜ ವಿಜ್ಞಾನ ಭಾಗ-1 | **"ಹೊಸ ಧರ್ಮಗಳ ಉದಯ"** ಎಂಬ ಹೊಸ ಅಧ್ಯಾಯವನ್ನು ಸೇರ್ಪಡೆ ಮಾಡಲಾಗಿದೆ. |
| 4 | 6ನೇ ತರಗತಿ ಸಮಾಜ ವಿಜ್ಞಾನ ಭಾಗ-2 | ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಎಂಬ ಅಧ್ಯಾಯದ ಜೊತೆಗೆ **"ಮಾನವ ಹಕ್ಕುಗಳು"** ಎಂಬ ವಿಷಯಾಂಶವನ್ನು ಹೊಸದಾಗಿ ಸೇರ್ಪಡೆ ಮಾಡಲಾಗಿದೆ. |
| 5 | 7ನೇ ತರಗತಿ ಸಮಾಜ ವಿಜ್ಞಾನ ಭಾಗ-1 | **"ಜಗತ್ತಿನ ಪ್ರಮುಖ ಘಟನೆಗಳು"** ಎಂಬ **ಅಧ್ಯಾಯದಲ್ಲಿ** ಎಲ್ಲೆಲ್ಲಿ **'ರಿಲಿಜನ್'** ಎಂದು ಬಂದಿದೆಯೋ ಅಲ್ಲೆಲ್ಲಾ **'ಧರ್ಮ'** ಎಂದು ಬದಲಾಯಿಸಲಾಗಿದೆ. |
| 6 | 7ನೇ ತರಗತಿ ಸಮಾಜ ವಿಜ್ಞಾನ ಭಾಗ-1 | **"ಮೈಸೂರು ಮತ್ತು ಇತರ ಸಂಸ್ಥಾನಗಳು"** ಎಂಬ ಅಧ್ಯಾಯದ ಜೊತೆಗೆ ಮುಮ್ಮಡಿಕೃಷ್ಣರಾಜ ಒಡೆಯರ್, ಕಮಿಷನರ್‌ಗಳ ಆಡಳಿತ, ಹತ್ತನೆಯ ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ ವಿಶ್ವೇಶ್ವರಯ್ಯ ಮತ್ತು ಸರ್. ಮಿರ್ಜಾ ಇಸ್ಮಾಯಿಲ್ ಈ ವಿಷಯಾಂಶಗಳನ್ನು ಹೊಸದಾಗಿ ಸೇರ್ಪಡೆ ಮಾಡಲಾಗಿದೆ. |
| 7 | 7ನೇ ತರಗತಿ ಸಮಾಜ ವಿಜ್ಞಾನ ಭಾಗ-2 | **"ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು"** ಎಂಬ ಅಧ್ಯಾಯದ ಜೊತೆಗೆ **ಮಹಿಳಾ ಸಮಾಜ ಸುಧಾರಕಿಯರು** ಎಂಬ ವಿಷಯಾಂಶಗಳನ್ನು ಹೊಸದಾಗಿ ಸೇರ್ಪಡೆ ಮಾಡಲಾಗಿದೆ. |
| 8 | 7ನೇ ತರಗತಿ ಸಮಾಜ ವಿಜ್ಞಾನ ಭಾಗ-2 | **"ಸ್ವಾತಂತ್ರ್ಯ ಸಂಗ್ರಾಮ"** ಎಂಬ **ಅಧ್ಯಾಯದ** ಜೊತೆಗೆ**"ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು** ಎಂಬ ವಿಷಯಾಂಶಗಳನ್ನು ಸೇರಿಸಲಾಗಿದೆ. |
| 9 | 10ನೇ ತರಗತಿ ಸಮಾಜ ವಿಜ್ಞಾನ ಭಾಗ-1 | **"ಭಾರತಕ್ಕಿರುವ ಸವಾಲುಗಳು ಹಾಗೂ ಪರಿಹಾರೋಪಾಯಗಳು"** ಎಂಬ ಅಧ್ಯಾಯದ **ಪ್ರಾದೇಶಿಕವಾದ** ಎಂಬ ಉಪ ಶೀರ್ಷಿಕೆ ಅಡಿಯಲ್ಲಿ" ಭಾಷಾಭಿಮಾನವು ರಾಷ್ಟ್ರೀಯವಾದದ ವಿರುದ್ಧ ಸಂಕುಚಿತ ಮನೋಭಾವವನ್ನು ಬೆಳೆಸುತ್ತದೆ. ಪ್ರಾದೇಶಿಕ ವಾದವನ್ನು ವೈಭವೀಕರಿಸುವುದರಿಂದ ದೇಶದ ಏಕತೆಗೆ ಧಕ್ಕೆ ಉಂಟಾಗುತ್ತದೆ. ಇತ್ತೀಚೆಗೆ ಆಂಧ್ರಪ್ರದೇಶದಲ್ಲಿನ ತೆಲಂಗಾಣ ಭಾಗದ ಪ್ರಾದೇಶಿಕವಾದದ ಹೋರಾಟವನ್ನು ಗಮನಿಸಬಹುದು. ದೇಶದ ಇನ್ನಿತರ ಭಾಗಗಳಲ್ಲಿ ನಡೆಯುತ್ತಿರುವ ಪ್ರಾದೇಶಿಕವಾದದ ಹೋರಾಟಗಳು ಕೂಡ ದೇಶದ ಅಭಿವೃದ್ಧಿಗೆ ತೊಡಕಾಗುವ ಸಾಧ್ಯತೆಗಳಿವೆ. ಇಂತಹ ಸಂಕುಚಿತ ಪ್ರಾದೇಶಿಕ ವಾದವನ್ನು ದೂರೀಕರಿಸಲು ನಮ್ಮ ಭಾರತ ಸಂವಿಧಾನವೇ ಹಲವಾರು ಮಾರ್ಗಗಳನ್ನು ಸೂಚಿಸಿದೆ."ಎಂಬ ವಾಕ್ಯಗಳನ್ನು ಕೈಬಿಡಲಾಗಿದೆ. |